ಬಟ್ಟೆಯಿಂದ ಮಾಡಿರುವ ಕುರೂಸು (ಕ್ರಾಸ್) ಮಾತ್ರ' ಎಂದು ಅತ್ತಳು.

ಇನಾಸನಿಗೆ ದುಃಖ ಬಂತು. ಕುಡಿದು ತನ್ನ ಸಂಸಾರವನ್ನೇ ತಾನು ಹಾಳು ಮಾಡಿದೆ ಎಂದು ಜ್ಞಾನೋದಯವಾದಂತೆ ಎದ್ದು ನಿಂತ. ಮಗನನ್ನು ತನ್ನ ಜೊತೆ ಎಬ್ಬಿಸಿ 'ನತ್ತಲಾ, ನಾನು ರಥಬೀದಿಗೆ ಹೋಗಿ ರಾಂಭಟ್ಟರಲ್ಲಿ ನೂರು ರೂಪಾಯಿ ಸಾಲ ಕೇಳಿ ಬರುತ್ತೇನೆ. ಆದರೆ ಅವರು ಸಾಲ, ಕೊಡಬೇಕಾದರೆ, ಕೈ ಮುರಿದ ಇವನನ್ನೂ ತೋರಿಸಬೇಕಾಗುತ್ತದೆ' ಎಂದ.

ನತ್ತಲಾಳಿಗೆ ರಾಂಭಟ್ಟರು ತನ್ನ ಗಂಡನಿಗೆ ಸಾಲ ಕೊಡುವವರಲ್ಲ ಎಂದು ಗೊತ್ತಿತ್ತು. ತಾನು ಹೋಗಿ ಕೇಳಿದರೆ ಕೊಡಬಹುದು ಎಂಬ ಧೈರ್ಯ ಇತ್ತು. ಆ ಮಾತನ್ನೇ ಅವಳು ಗಂಡನಿಗೆ ಹೇಳಿದಳು. ಇನಾಸನಿಗೆ ಸಿಟ್ಟು ಬಂತು 'ನಾನು ಅಂಥ ಪಡಪೋಸಿ ಎಂದು ಅವರು ಸಾಲ ಕೊಡದಿದ್ದರೆ ಬೇಡ, ಬೇರೆ ಯಾರಾದರೂ ಸಿಕ್ಕಿಯಾರು. ಏಸು ನನ್ನ ಜೊತೆ ಇದ್ದಾನೆ' ಎನ್ನುತ್ತಾ ಮಗನೊಟ್ಟಿಗೆ ರಥಬೀದಿಗೆ ಬಂದ.

ತಂದೆ ಮಗ ಇಬ್ಬರೂ ರಥಬೀದಿಗೆ ಬರುವಾಗ ಗಾಡಿ ಹುಸೇನಿ ಆಗ ತಾನೇ ಬಾಲಾಡಿಯಿಂದ ತಂದ ಜಿನಸಿ ಸಾಮಾನುಗಳನ್ನು ಗಾಡಿಯಿಂದ ಇಳಿಸುತ್ತಿದ್ದ. ಭಟ್ಟರು ಜಿನಸಿ ಸಾಮಾನಿನ ಪಟ್ಟಿಗೆ ಈಗ ಬಂದವುಗಳು ಸರಿಯಾಗಿವೆಯೇ? ಎಂದು ತಾಳೆ ನೋಡುವುದರಲ್ಲಿ ಮಗ್ನರಾಗಿದ್ದರು.

ಭಟ್ಟರಿಗೆ ಎಂದೂ ಕೈಮುಗಿಯದ ಇನಾಸಪುರ್ಬು ಅವರಿಗೆ ಕೈ ಮುಗಿದು 'ಸ್ವಾಮಿ ನನ್ನ ಮಗನ ಅವಸ್ಥೆ ನೋಡಿ' ಎಂದು ಗದ್ಗದಿತನಾಗಿ ಹೇಳಿದ ಆಮೇಲೆ ಎಂಥ ಆಟವೋ ಏನೋ! ಬಿದ್ದು ಕೈ ಮುರಿದುಕೊಂಡಿದ್ದಾನೆ. ನಾಳೆ ಕಾರ್ಕಳಕ್ಕೆ ಹೋಗಿ ಚಿಕಿತ್ಸೆ ಕೊಡಿಸಲಿಕ್ಕೆ ನೂರು ರೂಪಾಯಿ ಸಾಲ ಬೇಕಿತ್ತು' ಎಂದು ಕೈಗೆ ಬಟ್ಟೆ ಸುತ್ತಿಕೊಂಡಿದ್ದ ಮಗನಲ್ಲಿ 'ನಿನ್ನ ಕೈ ತೋರಿಸು' ಎಂದ.

ಸಿರಿಲ್ ಭಟ್ಟರ ಸಮೀಪಕ್ಕೆ ಬಂದು ಕೈ ತೋರಿಸಿದ. ಭಟ್ಟರು ಕಂಡೂ ಕಾಣದ ಹಾಗೆ ಸಿರಿಲ್‌ನನ್ನು ನೋಡದೆ, 'ಇಲ್ಲ, ಒಂದು ನಯಾಪೈಸೆಯೂ ನಾನು ಕೊಡುವುದಿಲ್ಲ. ಯಾಕೆಂದರೆ ನೀನೇ ಕುಡಿದು ಇವನ ಕೈ ಮುರಿದಿರಬೇಕು ಎಂದು ನನಗೆ ಅನಿಸುತ್ತದೆ' ಎಂದರು.

ಇನಾಸ ಮತ್ತೆ ಎರಡೂ ಕೈ ಜೋಡಿಸಿ 'ನಾನು ಅತ್ತೂರು ಚರ್ಚಿನ ಸೈಂಟ್ ಲಾರೆನ್ಸ್‌ರ ಸಾಕ್ಷಿಯಾಗಿಯೂ ಇವನ ಕೈ ಮುರಿದಿಲ್ಲ ಸ್ವಾಮಿ. ಅವನು ಕಬಡ್ಡಿ ಆಡುವಾಗ ಆಯತಪ್ಪಿ ಬಿದ್ದು ಕೈಮುರಿದುಕೊಂಡ' ಎಂದ.

ಭಟ್ಟರಿಗೆ ಸಿಟ್ಟು ಬಂತು 'ನಿನಗೆ ದೇವರೂ ಇಲ್ಲ, ಚರ್ಚೂ ಇಲ್ಲ. ನೀನೊಬ್ಬ ಮೂರ್ಖ, ಶತಮೂರ್ಖ. ಒಂದು ದಿನವಾದರೂ ಈ ಮಗುವಿಗೆ ಒಂದು ಬಿಸ್ಕೇಟ್ ಪ್ಯಾಕೆಟ್ ನಮ್ಮ ಅಂಗಡಿಯಿಂದ ಕೊಂಡು ಹೋದದ್ದಿದೆಯ ನಿನ್ನ ಜೀವಮಾನದಲ್ಲಿ?' ಎನ್ನುತ್ತಲೇ 'ನೀನು ಎಷ್ಟು ಹೊತ್ತು ಇಲ್ಲಿ ನಿಂತರೂ ಚಿಕ್ಕಾಸು ಸಿಗದು!' ಎಂದರು.

ಇನಾಸನಿಗೆ ಸಿಟ್ಟು ಬಂತು. ಕುಡಿದಿದ್ದರೆ ಆತ ಭಟ್ಟರ ಮೇಲೆ ಏರಿ ಹೋಗುತ್ತಿದ್ದನೋ ಏನೋ! ಆದರೆ ಆತ ತಾನೇನಾದರೂ ಈಗ ದುಡುಕಿದರೆ, ಭಟ್ಟರ ಅಂಗಡಿಯಲ್ಲಿರುವ ಗ್ರಾಹಕರು ತನ್ನ ಮೇಲೆ ಮುಗಿಬಿದ್ದಾರು ಎಂದುಕೊಂಡು ಹೆಜ್ಜೆ ಹಿಂದಕ್ಕಿಟ್ಟು 'ಮುಂದೇನು?' ಎಂಬಂತೆ ಆಚೀಚೆ ನೋಡತೊಡಗಿದ. ಆಗ ಗಾಡಿ ಹುಸೇನಿ ಅವನನ್ನು ಕೈ ಸನ್ನೆಯಲ್ಲಿ ಕರೆದು ಕುಪ್ಪಣ್ಣಯ್ಯನವರ ಹೋಟೆಲಿಗೆ ಬರಲು ಸೂಚಿಸಿದ. ಆಮೇಲೆ ಹುಸೇನಿ, 'ಭಟ್ಟರೇ, ನನ್ನ ಬಾಡಿಗೆ ಕೊಟ್ಟು ಬಿಡಿ, ನಾನು ಚಾ ಕುಡಿಯಲು ಹೋಟೆಲಿಗೆ ಹೋಗಬೇಕು' ಎಂದ.

ಭಟ್ಟರು ಹನ್ನೆರಡು ರೂಪಾಯಿ ಬಾಡಿಗೆ ಕೊಟ್ಟರು. ಅದನ್ನು ಹಿಡಿದುಕೊಂಡ ಹುಸೇನಿ ಕುಪ್ಪಣ್ಣಯ್ಯನವರ ಹೋಟೆಲಿಗೆ ತಂದೆ ಮಗನನ್ನು ಕರೆದೊಯ್ದ. ಕುಪ್ಪಣ್ಣಯ್ಯನವರು ಇನಾಸ ಕುಡಿಯದೇ ಬಂದದ್ದು, ಅವನ ಮಗ ಕೈಗೆ ಬಟ್ಟೆ ಸುತ್ತಿಕೊಂಡದ್ದು, ಹುಸೇನಿ ಇಬ್ಬರನ್ನೂ ಕರಕೊಂಡು ಬರುವುದು ನೋಡಿ ಗಾಬರಿಗೊಂಡರು. ಅವರು ಏನು? ಏನು? ಎಂಬಂತೆ ಹುಸೇನಿ ಮತ್ತು ಇನಾಸನ ಮುಖ ನೋಡುತ್ತಿದ್ದಂತೆ ಹುಸೇನಿಯೇ ಮುಂದೆ ನಿಂತು ನಡೆದ ವಿಷಯವನ್ನು ಕುಪ್ಪಣ್ಣಯ್ಯನ ಮುಂದಿಟ್ಟು 'ಭಟ್ಟರು ಕಣ್ಣಲ್ಲಿ ರಕ್ತ ಇಲ್ಲದವರ ಹಾಗೆ ನಡೆದುಕೊಂಡರು. ಇನಾಸ ಕುಡುಕ ನಿಜ. ಆದರೆ ಈ ಮಗುವಿನ ಮುಖ ನೋಡಿಯಾದರೂ ಒಂದು ನೂರು ರೂಪಾಯಿ ಕೊಡಬಹುದಿತ್ತಲ್ಲ ಅವರಿಗೆ?' ಎಂದ.

ಸಿರಿಲ್ ನೋವನ್ನು ತೀವ್ರವಾಗಿ ಅನುಭವಿಸುತ್ತಿದ್ದ. ಅವನಿಗಿಂತ ಹೆಚ್ಚಿನ ನೋವು ಇನಾಸನಲ್ಲೂ ಇತ್ತು.